# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ.**908/2022**

ಚಾಸಾ-20 ಫ್ರಾಸಾ-7

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 20-05-2026

| | | |
|---|---|---|
| ಹೆಸರು | : | ಜಗದೇವಪ್ಪ |
| ತಂದೆಯ  ಹೆಸರು | : | ದೇವಣ್ಣ |
| ವಯಸ್ಸು | : | 43 ವರ್ಷ |
| ಉದ್ಯೋಗ | : | CPI, ಕಾಳಗಿ |
| ವಾಸಸ್ಥಳ | : | ಕಾಳಗಿ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ದಿಃ 13-01-2021 ರಿಂದ 22-07-2022 ರವರೆಗೆ ನಾನು ವೃತ್ತ ನಿರೀಕ್ಷಕರು ಅಫಜಲಪೂರ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 09.10.2021 ರಂದು ಚಾಸಾ 19 ರವರಿಂದ ಈ ಪ್ರಕರಣ ಕಡತಗಳನ್ನು ಪಡೆದುಕೊಂಡು, ಅದೇ ದಿನ ಚಾಸಾ 2, 3 ರವರ ಸಮಕ್ಷಮ ಶವಪಂಚನಾಮೆ ಮಾಡಿ ಪಂಚನಾಮೆ ಕಾಲಕ್ಕೆ ತೆಗೆದುಕೊಂಡ ಭಾವಚಿತ್ರಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ದಿಃ 10-10-2021 ರಂದು ಗುನ್ಹೆಸ್ಥಳಕ್ಕೆ ಭೇಟಿಯಾಗಿ ಚಾಸಾ 4, 5 ರವರ ಸಮಕ್ಷಮ ಗುನ್ಹೆ ಸ್ಥಳ ಪಂಚನಾಮೆ ಮಾಡಿ ಸ್ಥಳದಲ್ಲಿದ್ದ ಮೋಟರ ಸೈಕಲ ಮತ್ತು ಟ್ರಾಕ್ಟರನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 1 ರವರ ಮರುಹೇಳಿಕೆ ಪಡೆದಿರುತೇನೆ ಮತ್ತು ಚಾಸಾ 6 ರಿಂದ 12 ರವರ ಸಾಕ್ಷಿ ಹೇಳಿಕೆ ಪಡೆದಿರುತೇನೆ. ಅದೇ ದಿನ ಚಾಸಾ 16 ರವರಿಂದ ಶವ ಹಸ್ತಾಂತರ ಕುರಿತು ವರದಿ ಪಡೆದಿರುತ್ತೇನೆ. ದಿಃ 12-10-2021 ರಂದು ಆರೋಪಿತನನ್ನು ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ.

ಆರೋಪಿತನ ಚಾಲನಾ ಪ್ರಮಾಣ ಪತ್ರ, ಆಧಾರ ಕಾರ್ಡ, RC ಟ್ರಾಕ್ಟರ ಸಂಬಂದಿಸಿದ ಇತರೆ ದಾಖಲಾತಿಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಮತ್ತು ಸದರಿ ಟ್ರಾಕ್ಟರನ್ನು

ಇಂಡೆಮನಿಟಿ ಬಾಂಡ ಪಡೆದು ಬಿಡುಗಡೆ ಮಾಡಿರುತ್ತೇನೆ. ದಿಃ 26-10-2021 ರಂದು ಮೃತನ ಮರಣೋತ್ತರ ಪರೀಕ್ಷೆ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 10-11-2021 ರಂದು ವಾಹನ ನಿರೀಕ್ಷಕರ ವರದಿ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.ದಿಃ 17-11-2021 ರಂದು ಚಾಸಾ 13, 14 ರವರ ಸಾಕ್ಷಿ ಹೇಳಿಕೆ ಪಡೆದಿರುತೇನೆ. ಅದೇ ದಿನ ಮೋಟರ ಸೈಕಲ RC ಮತ್ತು ಇನ್ಸೂರೆನ್ಸ ದಾಖಲಾತಿಗಳನ್ನು ಪಡೆದಿರುತ್ತೇನೆ. ತನಿಖೆ ಪೂರ್ಣಗೊಂಡಿದರಿಂದ ಆರೋಪಿತನ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣಾ ಪಟ್ಟಿಸಲ್ಲಿಸಿರುತ್ತೇನೆ.

ಸಾಕ್ಷಿಗೆ ಶವಪಂಚನಾಮೆ ವರದಿ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**2** ಎಂದು ಗುರುತಿಸಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**2**(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಗುನ್ಹೆಸ್ಥಳ ಪಂಚನಾಮೆ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**15** ಎಂದು ಗುರುತಿಸಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**15**(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಟ್ರಾಕ್ಟರ ಮತ್ತು ಮೋಟರ ಸೈಕಲಗೆ ಸಂಬಂಧಿಸಿದ ಎರಡು ಇಂಡೆಮನಿಟಿ ಬಾಂಡಗಳ ಪ್ರತಿಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-**19** ಮತ್ತು **20** ಎಂದು ಗುರುತಿಸಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**19**(ಎ) ಮತ್ತು ನಿಪಿ-**20**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮರಣೋತ್ತರ ಪರೀಕ್ಷೆ ವರದಿ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**17** ಎಂದು ಗುರುತಿಸಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**17**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ RTO ವರದಿ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**18** ಎಂದು ಗುರುತಿಸಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**18**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಶವಪಂಚನಾಮೆ ಮತ್ತು ಗುನ್ಹೆಸ್ಥಳ ಪಂಚನಾಮೆ ಕಾಲಕ್ಕೆ ತೆಗೆಯಲಾಯಿತು ಎಂದು ಹೇಳುವ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-**3** ಮತ್ತು **16** ಎಂದು ಗುರುತಿಸಲಾಗಿದೆ.

ಸಾಕ್ಷಿಗೆ ಜಪ್ತಿಪಡಿಸಿಕೊಂಡರು ಎಂದು ಹೇಳುವ ಟ್ರಾಕ್ಟರ ಮತ್ತು ಮೋಟರ ಸೈಕಲನ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-**4** ರಿಂದ **14** ಎಂದು ಗುರುತಿಸಲಾಗಿದೆ.

ಆರೋಪಿತನನು ನೋಡಿದಲಿ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **SGA** ವಕೀಲರಿಂದಃ-

ನಾನು ಚಾಸಾ 19 ರವರಿಂದ ಕಡತವನ್ನು ಸಮಯ ರಾತ್ರಿ 9-15 ಕ್ಕೆ ಪಡೆದಿರುತ್ತೇನೆ. ಶವಪಂಚನಾಮೆಯನ್ನು 9-30 ರಿಂದ 11 ಗಂಟೆವರೆಗೆ ಮಾಡಲಾಗಿದೆ. ಮೃತ ವ್ಯಕ್ತಿ ಅಪಘಾತ ಸ್ಥಳದಲ್ಲಿಯೇ ತೀರಿಕೊಂಡಿದ್ದ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ಶವತನಿಖೆ ಮಾಡಿಲ್ಲ ಎಂದರೆ ಸರಿ. ಘಟನಾ ಸ್ಥಳದಿಂದ ಆಸ್ಪತ್ರೆಗೆ ಮೃತದೇಹವನ್ನು ಯಾರು ತಲುಪಿಸಿರುತ್ತಾರೆ ಎಂಬುದು ಗೊತ್ತಿಲ್ಲ. ಮೃತನ ಶವ ಆಸ್ಪತ್ರೆಗೆ ಯಾವ ಸಮಯಕ್ಕೆ ತಲುಪಿತು ಎಂಬುದರ ಕುರಿತು ವಿಚಾರಣೆ ಮಾಡಿಲ್ಲ. ಚಾಸಾ 4, 5 ರವರು ಗುನ್ಹೆಸ್ಥಳದಲ್ಲಿ ಇದ್ದಿದ್ದರಿಂದ ಅವರಿಗೆ ನೋಟಿಸು ನೀಡಿಲ್ಲ. ಗುನ್ಹೆಸ್ಥಳದಲ್ಲಿ ಇವರಿಗೆ ಹೊರತುಪಡಿಸಿ ಇನ್ನೂ ಬೇರೆಯವರು ಇದ್ದರು. ಅಪಘಾತ ಸ್ಥಳದಲ್ಲಿ ಜಪ್ತಿಪಡಿಸಿಕೊಂಡ ವಾಹನಗಳು ರಸ್ತೆ ಅಡಚಣೆಗಾಗಿ ರಸ್ತೆ ಪಕ್ಕದಲ್ಲಿ ನಿಲ್ಲಿಸಲಾಗಿದ್ದು ನಂತರ ಅವುಗಳನ್ನು ಜಪ್ತಿಪಡಿಸಿಕೊಳ್ಳಲಾಗಿದೆ. ನಿಪಿ-16 ರಲ್ಲಿ ಜಪ್ತಿಪಡಿಸಿಕೊಂಡ ವಾಹನಗಳು ಕಾಣಿಸುವುದಿಲ್ಲ ಎಂದರೆ ಸರಿ. ಮೃತನಿಗೆ ತಲೆಗೆ ಗಂಭೀರ ಗಾಯವಾಗಿ ರಕ್ತಸ್ರಾವ ಆಗಿತ್ತು ಎಂದರೆ ಸರಿ. ರಕ್ತಸ್ರಾವ ಆದ ರಸ್ತೆಯ ಮೇಲೆ ಆದ ಕಲೆ ಕುರಿತು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಆ ಕುರಿತು ಭಾವಚಿತ್ರ ಇರುವುದಿಲ್ಲ. ನಿಪಿ-15 ರಲ್ಲಿ ಅಪಘಾತ ರಸ್ತೆಯ ಎಡಭಾಗದಲ್ಲಿ ಆಗಿದೆ ಎಂದು ತೋರಿಸಿದರಿಂದ ರಸ್ತೆ ವಾಹನ ಸಂಚಾರಕ್ಕೆ ಯಾವುದೇ ತೊಂದರೆ ಆಗುತ್ತಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಅಪಘಾತಕ್ಕೊಳಗಾದ ವಾಹನಗಳನ್ನು ರಸ್ತೆ ಅಡಚಣೆಗಾಗಿ ರಸ್ತೆ ಪಕ್ಕದಲ್ಲಿ ನಿಲ್ಲಿಸಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-16 ರಲ್ಲಿ ರಸ್ತೆ ಪಕ್ಕ ಗಿಡಗಂಟಿ ಇರುವುದರಿಂದ ರಸೆ ಪಕ್ಕದಲ್ಲಿ ವಾಹನ ನಿಲ್ಲಿಸಲು ಸ್ಥಳವಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೊಳಗಾದ ವಾಹನಗಳನ್ನು ನಮ್ಮ ಠಾಣಾ ಸಿಬ್ಬಂದಿ ಠಾಣೆಗೆ

ತಂದಿರುತ್ತಾರೆ. ಟ್ರ್ಯಾಕ್ಟರನ್ನು ಕೀ ಇಲ್ಲದೆ ನೇರವಾಗಿ ಚಾಲುಮಾಡಿಕೊಂಡು ಬಂದಿರುತ್ತೇವೆ. ನಿಪಿ-4 ರಿಂದ 14 ಠಾಣಾ ಆವರಣದಲ್ಲಿ ತೆಗೆಯಲಾಗಿದೆ ಎಂದರೆ ಸರಿ. ನಿಪಿ-4 ರಿಂದ 14 ಇವುಗಳನ್ನು ಠಾಣಾ ಉಪಯೋಗಿಸುವ ಕ್ಯಾಮರಾದಲ್ಲಿ ತೆಗೆಯಲಾಗಿದೆ. ಚಾಸಾ 4 ರಿಂದ 14 ರವರ ಸಾಕ್ಷಿ ಹೇಳಿಕೆಗಳನ್ನು ಕಚೇರಿಗೆ ನೋಟಿಸು ನೀಡದೇ ಹಾಗೆ ಕರೆಸಿ ಪಡೆದಿರುತ್ತೇವೆ. ಸಾಕ್ಷಿಗಳನ್ನು ಕರೆಯಲು ಯಾವ ಸಿಬ್ಬಂದಿ ಹೋಗಿದ್ದರು ಎಂದು ನೆನಪಿಲ್ಲ. ದಿಃ 10-10-2021 ರಂದು ಚಾಸಾ 6, 7 ರವರ ಸಾಕ್ಷಿ ಹೇಳಿಕೆ ಪಡೆದಿರುತ್ತೇನೆ. ಅವರುಗಳನ್ನು ಎಲ್ಲಿಂದಿ ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಹೇಳಿಕೆಗಳನ್ನು ನೇರವಾಗಿ ಬೆರಳಚ್ಚು ಮಾಡಲಾಗಿದೆ. ಒಂದು ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲು ಸುಮಾರು 10-15 ನಿಮಿಷ ಬೇಕಾಗುತ್ತದೆ. ಸಾಕ್ಷಿ ಹೇಳಿಕೆಯಲ್ಲಿ ಹೇಳಿಕೆ ಪಡೆದ ಸಮಯ ನಮೂದಿಸಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ 18 ರವರಿಗೆ ಮನವಿ ಪತ್ರವನ್ನು ದಿಃ12-10-2021 ರಂದು ನೀಡಿರುತ್ತೇನೆ. ಸದರಿ ಮನವಿ ಪತ್ರವನ್ನು ದೋಷಾರೋಪಣಾ ಪಟ್ಟಿಯಲ್ಲಿ ಅಳವಡಿಸಿಕೊಂಡಿಲ್ಲ ಎಂದರೆ ಸರಿ. ಚಾಸಾ 18 ರವರು ನನ್ನ ಗೈರುಹಾಜರಲ್ಲಿ ವಾಹನ ತಪಾಸಣೆ ಮಾಡಿರುತ್ತಾರೆ. ಚಾಸಾ 18 ರವರು ಯಾವ ವಾಹನ ತಪಾಸಣೆ ಮಾಡಿ ವರದಿ ನೀಡಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲವೆಂದು ಸೂಚಿಸುವುದು ಸರಿಯಲ್ಲ.

ಮೃತ ತಾನಾಗಿಯೇ ಬಿದ್ದು ಅಪಘಾತಪಡಿಸಿಕೊಂಡು ತೀರಿಕೊಂಡಿರುತ್ತಾನೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿತನ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸಾಕ್ಷಾದಾರಗಳು ಲಭ್ಯ ವಿಲ್ಲದೇ ಇದ್ದರೂ ಸಹ ಸುಳ್ಳು ದೋಷಾರೋಪಣೆ ಪಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ